# ಕನ್ನಡಿಗರೊಳಗೆ ಗಾಂಧಿಯ ವಿಚಾರಗಳು

ರವಿ ಬಸವರಾಜ ಸಣಕಂಬಿ

ಗಾಂಧಿಎನ್ನುವ ಹೆಸರೇಒಂದುರೋಮಾಂಚನಗಾಂಧಿಯ ಹೆಸರುಅವರ ವಿಚಾರಗಳು, ತತ್ವಸಿದ್ಧಾಂತಗಳನ್ನು ಕೇಳದವರೆ ಇಲ್ಲ. ಆದರೆ ಅವುಗಳನ್ನು ಪಾಲಿಸುವವರು, ಆ ರೀತಿ ನಡೆದುಕೊಳ್ಳುವವರು ಎಷ್ಟುಜನ?ಎನ್ನುವುದೆ ಪ್ರಶ್ನೆಯಾಗಿದೆ.ಗಾಂಧಿಯತತ್ವ ಸಿದ್ಧಾಂತಗಳು ಹೆಚ್ಚು ಬಳಕೆಯಿಲ್ಲದ ಕಾರಣಜಗತ್ತಿನಲ್ಲಿ ಹಿಂಸೆ, ಅಶಾಂತಿಗಳು ತಲೆದೋರಿವೆ. ಮಹಾನ್ ವಿಜ್ಞಾನಿ ಸಾಪೇಕ್ಷ ಸಿದ್ಧಾಂತದ ಪ್ರತಿಪಾದಕಆಲ್ಬರ್ಟ್ ಐನ್‌ಸ್ಟೀನ್ ಒಮ್ಮೆ "ಇತಿಹಾಸವನ್ನುತಿರುವಿ ಹಾಕಿದರೆಜಗತ್ತಿನಲ್ಲಿಗಾಂಧಿ ಎಂಬ ಒಬ್ಬ ಧೀಮಂತ ಮಹಾನ್ ವ್ಯಕ್ತಿ ನಡೆದು ಹೋದದಾರಿಯೇಅಚ್ಚರಿಯನ್ನು ಮೂಡಿಸುತ್ತದೆ" ಎಂದಿದ್ದಾರೆ.

ಗಾಂಧಿ ಎಂಬ ಮಹಾನ್ ವ್ಯಕ್ತಿ ನಡೆದು ಹೋದದಾರಿಯಲ್ಲಿ ಬಿಟ್ಟು ಹೋದಆಚಾರ–ವಿಚಾರ, ತತ್ವ–ಸಿದ್ಧಾಂತಗಳು ಹಲವಾರು.ಅವುಗಳೆಂದರೆ ಸತ್ಯ, ಅಹಿಂಸೆ, ಅಸಂಗ್ರಹ, ಅಹಿಂಸೆಯೇ ನನ್ನದೇವರು, ಸತ್ಯದ ಸಮ್ಯಕ್‌ದರ್ಶನ, ಆತ್ಮಸಾಕ್ಷತ್ಕಾರ, ಬ್ರಹ್ಮಚರ್ಯ ಇವು ಗಾಂಧಿಯು ಅನುಸರಿಸಿದ ಹಾಗೂ ಈ ಜಗತ್ತಿಗೆಕೊಟ್ಟು ಹೋದ ಸಿದ್ಧಾಂತಗಳು.

ಯಾವುದೇರೀತಿಯದುಡಿಮೆಯಿಲ್ಲದ ಸಂಪತ್ತನ್ನು ಧಿಕ್ಕರಿಸುತ್ತಿದ್ದಗಾಂಧಿ, ತಮ್ಮ ವೃತ್ತಿಬಾಂಧವರು, ಗೆಳೆಯರು, ಹಿತೈಷಿಗಳು ಪ್ರೀತಿಯಿಂದ ನೀಡುತ್ತಿದ್ದಉಡುಗೊರೆಯನ್ನು ನಿಷ್ಠುರವಾಗಿ ನಿರಾಕರಿಸುತ್ತಿದ್ದರು.

ಈ ಮೇಲೆ ಹೇಳಿದ ಗಾಂಧಿಯಎಲ್ಲಾ ವಿಚಾರಗಳು, ಸಂಗತಿಗಳು, ನೀತಿಗಳು, ತತ್ವಸಿದ್ಧಾಂತಗಳು ಹೀಗಾಗಲೇ ಕನ್ನಡಿಗರೊಳಗೆ ಅದರಲ್ಲೂಜನಪದ, ವಚನ ಚಳುವಳಿ ಹಾಗೂ ದಾಸ ಪಂಥದಲ್ಲಿ ಬಂದು ಹೋಗಿವೆ. ಆದರೆದುರಂತವೆಂದರೆ ನಮ್ಮಜನರ್‍ಯಾರೂ ಅವುಗಳನ್ನು ಒಪ್ಪಿಕೊಂಡಿಲ್ಲ, ಒಪ್ಪಿಕೊಳ್ಳಲು ತಯಾರಿಲ್ಲ. ಅದಕ್ಕಾಗಿಯೇ ನಮ್ಮ ಸಮಾಜಇನ್ನೂ ಶೋಚನಿಯ ಸ್ಥಿತಿಯಲ್ಲಿದೆ.

**ಸತ್ಯ**

ಗಾಂಧಿ ನಂಬಿದ ಸತ್ಯವೇದೇವರುಎನ್ನುವ ಮಾತಿನ ಮೌಲ್ಯವನ್ನು ಸಾವಿರಾರು ವರ್ಷಗಳ ಹಿಂದೆಯೇ ನಮ್ಮಜನಪದಕಾರರು ಹೇಳಿದ್ದರು.ಅದನ್ನು 'ಪುಣ್ಯಕೋಟಿ' ಜನಪದಗೀತೆಯಲ್ಲಿಕಾಣಬಹುದು.

ಸತ್ಯವೆ ನಮ ತಾಯಿ–ತಂದೆ

ಸತ್ಯವೆ ನಮ ಬಂಧು–ಬಳಗ

ಸತ್ಯ ವಾಕ್ಯಕೆತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು.

ಜನಪದರು ಹಾಗೂ ಗಾಂಧಿ ಸತ್ಯದ ಬಗೆಗೆ ಏನೇ ಹೇಳಿದರೂ ನಾವು ಅದನ್ನು ಪಾಲಿಸಲು ಸಿದ್ಧರಿಲ್ಲ. ಅನೇಕ ಅಸತ್ಯಗಳನ್ನೇ ಪಾಲಿಸುತ್ತ ಸತ್ಯವನ್ನೇ ಮರೆಮಾಡಿ ಬದುಕಿದ್ದೇವೆ.

ಜಾತಿಎನ್ನುವುದುಅಸತ್ಯಎಂದುಗೊತ್ತಿದ್ದರೂಅದನ್ನು ಪೋಷಿಸಿ ಬೆಳೆಸುತ್ತಿದ್ದೇವೆ. ಮನು ಜಾತಿಯ ಬಗೆಗೆ ಹೇಳಿದ ಅಸತ್ಯವನ್ನೇ ಸತ್ಯಎಂದು ನಂಬಿರುವ ನಮಗೆ ಗಾಂಧಿ ಹಾಗೂ ಜನಪದಕಾರರು ಹೇಳಿದ ಸತ್ಯದ ಮೌಲ್ಯ ತಿಳಿಯಲಾರದು. ಜಾತಿಎನ್ನುವಅಸತ್ಯವನ್ನುಇಟ್ಟುಕೊಂಡು ಸಮಾಜವನ್ನು ಹೊಡೆಯುತ್ತಿದ್ದೇವೆ. ಜಾತಿಎಂಬುದೇ ಸುಳ್ಳು ಎಂದು ಬಸವಣ್ಣ, ಕನಕದಾಸರು ಹೇಳಿದ ನಂತರವೂ ನಾವು ಅದನ್ನು ನಾಶಮಾಡುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿಲ್ಲ. ಸಾವಿರಾರು ಜಾತಿಗಳನ್ನು ಸೃಷ್ಟಿ ಮಾಡಿಕೊಂಡು, ಜಾತಿಗಳ ಹೆಸರಿನಲ್ಲಿ ಹೊಡೆದಾಡಿಕೊಂಡು ಸಾಯುತ್ತಿದ್ದೇವೆ.

ವಿಶ್ವಮಾನವ ಬಸವಣ್ಣ ಹೇಳಿದ.

ಕೊಲ್ಲುವವನೆ ಮಾದಿಗ, ಹೊಲಸು ತಿನ್ನುವವನೆ ಹೊಲೆಯ

ಕುಲವೇನು ಅವಂದಿರ ಕುಲವೇನು, ಸಕಲ ಜೀವಾತ್ಮರಿಗೆ

ಲೇಸನ್ನು ಬಯಸುವ ನಮ್ಮಕೂಡಲಸಂಗನ ಶರಣರೆಕುಲಜರು.

ಹಾಗೂ ದಾರ್ಶನಿಕಕನಕದಾಸರು ಹೇಳುವಂತೆ – "ಕುಲ ಕುಲವೆಂದು ಹೊಡೆದಾಡದಿರಿ" ಎಂದುಈರ್ವರೂಜಗತ್ತಿಗೆಇಂತಹ ಸಂದೇಶ ಸಾರಿದ ನಂತರವೂ ನಾವು ಜಾತಿಯಿಂದ ಹೊರಗೆ ಬರಲು ಸಾಧ್ಯವಾಗುತ್ತಿಲ್ಲಎನ್ನುವುದಾದರೆ, ಅದಕ್ಕೆಕಾರಣ ನಾವು ಸತ್ಯವನ್ನು ಒಪ್ಪಿಕೊಳ್ಳಲು ತಯಾರಿಲ್ಲ

ಎಂದರ್ಥ.ಅದಕ್ಕಾಗಿಯೇ ಲೋಹಿಯಾ ಹೇಳಿದ್ದು ಈ ದೇಶದಲ್ಲಿ "ಜಾತಿಎನ್ನುವುದು ಮೈಗಂಟಿದಚರ್ಮವಿದ್ದ ಹಾಗೆ".

ಲೋಹಿಯಾ ಹೇಳುವ ಮಾತು ಸತ್ಯ.ಅದಕ್ಕೆ ಪೂರಕವಾಗಿ ಕಳೆದ ಐವತ್ತುಅರವತ್ತು ವರ್ಷಗಳಿಂದ ಜಾತಿತನ್ನಆಟವಾಡುತ್ತಲೇ ಬರುತ್ತಿದೆ.

ಉದಾ: ಹೊಸದುರ್ಗದ ಬೂದಿಹಳ್ಳಿಯಲ್ಲಿ ಸುಮಾರು 33 ದಲಿತ ಕುಟುಂಬಗಳನ್ನು ಅಸ್ಪೃಶ್ಯರುಎನ್ನುವಕಾರಣಕ್ಕೆಊರಿನಿಂದ ಬಹಿಷ್ಕಾರ ಹಾಕಿದ್ದಾರೆ.ಇನ್ನೂ ಈ ನಾಡಿನ ಹಳ್ಳಿಗಳಲ್ಲಿ ದಲಿತರಕ್ಷೌರ ಮಾಡಲುಒಪ್ಪುತ್ತಿಲ್ಲ. ನೂರಾರು ಹಳ್ಳಿಗಳಲ್ಲಿ ಈಗಲೂ ದಲಿತರಿಗೆ ದೇವಸ್ಥಾನಗಳಿಗೆ ಪ್ರವೇಶವಿಲ್ಲ. ನಗರಗಳು ಇದಕ್ಕೆ ಹೊರತಾಗಿಲ್ಲ. ಮಾಂಸಹಾರಿಗಳಿಗೆ ಮನೆ ಕೊಡುವುದಿಲ್ಲ ಎನ್ನುವುದುಜಾತಿಯ ಮತ್ತೊಂದು ಮುಖವಾಡವೇ ಸರಿ.

ಮೊನ್ನೆ ಮೊನ್ನೆ (ಸೆಪ್ಟೆಂಬರ್ 2014) ತಮಿಳುನಾಡಿನ ಮಧುರೈಯಲ್ಲಿಒಬ್ಬದಲಿತ ಹುಡುಗಕೈಗಡಿಯಾರಕಟ್ಟಿಕೊಂಡು ಬಂದಾಗ ಸವರ್ಣಿಯರುಆತನಕೈಯನ್ನೇಜಜ್ಜಿ ಕತ್ತರಿಸಿದ್ದಾರೆ.

2000ನೆಯ ಇಸವಿಯಲ್ಲಿ ಏಳು ಜನದಲಿತರನ್ನುಜೀವಂತವಾಗಿ ಸುಟ್ಟ ಕಂಬಾಲಹಳ್ಳಿಯ ಸವರ್ಣಿಯರಿಗೆಯಾವ ಶಿಕ್ಷೆಯೂ ಆಗುವುದಿಲ್ಲ ಎನ್ನುವಲ್ಲಿಯೇ ಸತ್ಯ ಸತ್ತು ಮೂಲೆ ಸೇರಿದೆಎನ್ನುವುದು ಸ್ಪಷ್ಟವಾಗುತ್ತದೆ.ಏನೇ ಆಗಲಿ ಈ ದೇಶದವರಿಗೆ ಸತ್ಯ ಮಾತ್ರಕಹಿಯಾದದ್ದುಎಂದೆನಿಸುತ್ತಿದೆ.

**ಅಹಿಂಸೆ:**

ಗಾಂಧೀಜಿಜೀವನದುದ್ದಕ್ಕೂಅಹಿಂಸೆಯನ್ನೇ ಪ್ರತಿಪಾದಿಸುತ್ತಾ ಬಂದವರು.ಆದರೆಇತಿಹಾಸದುದ್ದಕ್ಕೂ ಹಿಂಸೆ ನಡೆಯುತ್ತಲೇ ಬಂದಿದೆ. ಸವರ್ಣಿಯರು ತಳ ಸಮುದಾಯದವರನ್ನು ಹಿಂಸಿಸಿದ ರೀತಿಅಮಾನವೀಯವಾದುದು.

ಗಾಂಧಿಯ ಅಹಿಂಸಾ ತತ್ವ ವಿಚಾರ ಪ್ರತಿಪಾದನೆಯು 12ನೆಯ ಶತಮಾನದ ವಚನಕಾರರಲ್ಲಿಕಂಡುಬರುತ್ತದೆ.ಅದು ಬಸವಣ್ಣನವರಿಂದಲೇಆರಂಭವಾಗುತ್ತದೆ.

ಹಬ್ಬಕ್ಕೆಂದುತಂದ ಹರಕೆಯಕುರಿ

ತೋರಣಕ್ಕೆಂದುತಂದ ತಳಿರ ಮೇಯಿತ್ತು

ಅದಂದೆ ಹುಟ್ಟಿತ್ತು, ಅದಂದೆ ಹೊಂದಿತ್ತು

ಕೊಂದವರುಳಿದರೆ ಕೂಡಲಸಂಗಮದೇವಾ.

ದಯವಿಲ್ಲದಧರ್ಮಅದಾವುದಯ್ಯಾ

ದಯವಿರಬೇಕು ಸಕಲ ಪ್ರಾಣಿಗಳೆಲ್ಲರಲಿ

ದಯವೇಧರ್ಮದ ಮೂಲವಯ್ಯ.

ಎನ್ನುವ ಬಸವಣ್ಣನವರ ಮಾತುಗಳಲ್ಲಿ ಅಹಿಂಸಾತತ್ವಅಡಗಿರುವುದನ್ನುಕಾಣಬಹುದು.ಮುಂದೆ ಬಂದರೆ ಹಾಯಬೇಡಿ, ಹಿಂದೆ ಬಂದರೆಒದೆಯಬೇಡಿಎನ್ನುವಜನಪದಗೀತೆಯಲ್ಲೂಕೂಡಾ ಅಹಿಂಸಾ ತತ್ವವಿರುವುದನ್ನುಕಾಣಬಹುದು.ಭಯೋತ್ಪಾದನೆಯ ಬೇಗೆಯಲ್ಲಿ ಬೇಯುತ್ತಿರುವ ಈ ಜಗತ್ತಿಗೆಗಾಂಧಿಯ ಅಹಿಂಸಾ ತತ್ವದ ಸಂದೇಶಅರ್ಥವಾಗುತ್ತಿರಬಹುದು.

**ಅಸಂಗ್ರಹ ಪ್ರವೃತ್ತಿ:**

ಅತಿಯಾಗಿಕೂಡಿಡುವ, ಸಂಗ್ರಹ ಪ್ರವೃತ್ತಿಯನ್ನುಗಾಂಧೀಜಿಒಪ್ಪುತ್ತಿರಲಿಲ್ಲ. ಸಂಗ್ರಹ ಪ್ರವೃತ್ತಿ ನಮ್ಮ ಮುಂದಿನ ಪೀಳಿಗೆಯನ್ನು ದಾರಿದ್ರ್ಯರನ್ನಾಗಿಸುತ್ತದೆಎನ್ನುವುದುಗಾಂಧಿಯ ವಾದವಾಗಿತ್ತು.ಅದಕ್ಕೆತಮ್ಮ ಮನೆಯಲ್ಲಿಏನೆಲ್ಲಾ ಶ್ರೀಮಂತಿಕೆಯಿದ್ದರೂ ಅದನ್ನೆಲ್ಲಾ ಬಿಟ್ಟು ಫಕೀರನಂತೆ ಬದುಕು ಸವೆಸುತ್ತಾರೆ.ಮುಂದೆ ಬಂದ ಲಾಲ್‌ಬಹದ್ದೂರ್‌ಶಾಸ್ತ್ರೀ, ರಾಧಾಕೃಷ್ಣನ್, ಅಂಬೇಡ್ಕರ್ ಮುಂತಾದವರು ಸಂಗ್ರಹ ಪ್ರವೃತ್ತಿಯನ್ನುಖಂಡಿಸುತ್ತಾರೆ.ಕನ್ನಡಿಗರಲ್ಲೂ ಈ ಸಂಗ್ರಹ ಪ್ರವೃತ್ತಿಯನ್ನು ವಿರೋಧ ಮಾಡುವಧೋರಣೆಯನ್ನುಇತಿಹಾಸದುದ್ದಕ್ಕೂ ನೋಡಬಹುದು. ವಚನಕಾರರಂತೂಅಸಂಗ್ರಹ ಪ್ರವೃತ್ತಿ – ಯವರಾಗಿದ್ದರು.ಬಸವಣ್ಣನವರ ಈ ವಚನದಲ್ಲಿಅದನ್ನು ಸ್ಪಷ್ಟವಾಗಿಕಾಣಬಹುದು.

ಅನ್ನದೊಳಗೊಂದಗುಳ, ಚಿನ್ನದೊಳಗೊಂದೊರೆಯು

ವಸ್ತ್ರದೊಳಗೊಂದೆಳೆಯ, ಇಂದಿಂಗೆ ನಾಳಿಂಗೆ

ಎನ್ನ ಮಡದಿ ಮಕ್ಕಳಿಗೆ ಕೂಡಿಟ್ಟೆನಾದೊಡೆ

ನಿಮ್ಮಾಣೆ ನಿಮ್ಮ ಪ್ರಮಥರಾಣೆಕೂಡಲಸಂಗಮದೇವಾ.

ಬಸವಣ್ಣನವರ ಸಮಕಾಲೀನ ವಚನಕಾರ್ತಿಯಾದಆಯ್ದಕ್ಕಿ ಲಕ್ಕಮ್ಮಅಸಂಗ್ರಹ ಪ್ರವೃತ್ತಿಯ ಬಗೆಗೆ ತಳೆದ ಧೋರಣೆಜಗತ್ತೇ ಮೆಚ್ಚುವಂತಹದ್ದು.ಅವಳ ಈ ಕೆಳಗಿನ ವಚನ ಲಕ್ಕಮ್ಮನಲ್ಲಿದ್ದಅಸಂಗ್ರಹದಧೋರಣೆಯಚಿತ್ರಣವನ್ನು ತಿಳಿಸುತ್ತದೆ.

ಆಸೆಯೆಂಬುದು ಅರಸಿಂಗಲ್ಲದೆ

ಶಿವಭಕ್ತರಿಗುಂಟೆ ಅಯ್ಯಾ?

ರೋಷವೆಂಬುದುಯಮದೂತರಿಗಲ್ಲದೆ

ಅಜಾತರಿಗುಂಟೆಅಯ್ಯಾ?

ಈಸಕ್ಕಿಯಾಸೆ ನಿಮಗೇಕೆ?ಈಶ್ವರನೊಪ್ಪ

ಮಾರಯ್ಯ ಪ್ರಿಯಅಮಲೇಶ್ವರಲಿಂಗಕ್ಕೆದೂರ ಮಾರಯ್ಯ

ಆಯ್ದಕ್ಕಿ ಲಕ್ಕಮ್ಮ ಹಾಗೂ ಅವಳ ಪತಿಆಯ್ದಕ್ಕಿ ಮಾರಯ್ಯರ ನಡುವೆ ನಡೆದ ಸಂಭಾಷಣೆಇದು.ಮಾರಯ್ಯರೈತರುಕಣದಲ್ಲಿರುವ ಕಾಳುಗಳ ರಾಶಿಯನ್ನು ತುಂಬಿಕೊಂಡು ಹೋದ ನಂತರಕಣದಲ್ಲಿ ಉಳಿದ ಕಾಳುಗಳನ್ನು ಆರಿಸಿಕೊಂಡು ಬಂದುಜೀವನ ನಡೆಸುತ್ತಿದ್ದರು.ಒಂದು ದಿನ ಬಸವಣ್ಣ ಮಾರಯ್ಯನನ್ನು ಪರೀಕ್ಷೆ ಮಾಡಲೋಸ್ಕರ, ಮಾರಯ್ಯ ಕಾಳನ್ನು ಆರಿಸುವಜಾಗಅರಿತುಅಲ್ಲಿ ಹೆಚ್ಚಾಗಿ ಕಾಳುಗಳನ್ನು ಚೆಲ್ಲಿಸುತ್ತಾನೆ. ಅದನ್ನು ನೋಡಿ ಆಸೆಗೊಳಗಾದ ಮಾರಯ್ಯ ಪ್ರತಿದಿನಕ್ಕಿಂತ ಹೆಚ್ಚಿನ ಕಾಳುಗಳನ್ನು ಆರಿಸಿಕೊಂಡು ಮನೆಗೆ ತರುತ್ತಾನೆ. ಅದನ್ನು ನೋಡಿದ ಮಾರಯ್ಯನ ಹೆಂಡತಿಯಾದ ಲಕ್ಕಮ್ಮ ಹೇಳುವ ಮಾತುಗಳು ವಚನಕಾರರ ಸತ್ಯ, ಪ್ರಾಮಾಣಿಕತೆಗೆ ಸಾಕ್ಷಿಯಾಗಿ ನಿಂತಿವೆ.

ಕನಕದಾಸರುತಮಗೆದೊರೆತಕೊಪ್ಪರಿಗೆ ಬಂಗಾರವನ್ನು ಸಾಮಾಜಿಕಉದ್ಧಾರಕ್ಕಾಗಿ ಬಳಸಿದ್ದು ಕೂಡ, ಅವರಲ್ಲಿದ್ದಅಸಂಗ್ರಹ ವ್ಯಕ್ತಿತ್ವವೇಆಗಿದೆ.

ಸರ್ವಪಲ್ಲಿರಾಧಾಕೃಷ್ಣನ್ ಈ ದೇಶದರಾಷ್ಟ್ರಪತಿಯಾದಾಗಅವರ ಸಂಬಳ ಹತ್ತು ಸಾವಿರ, ಆದರೆಅವರು ಈ ಹುದ್ದೆಗೆ ಬಂದತಕ್ಷಣ, ಸರ್ಕಾರಕ್ಕೆ ಪತ್ರ ಬರೆದು ನನಗೆ ಹತ್ತು ಸಾವಿರ ಬಹಳವಾಯಿತು.ಅದರ ಬದಲಾಗಿ ಮೂರು ಸಾವಿರಕೊಡಿ ಸಾಕು ಎನ್ನುತ್ತಾರೆ.ಆ ಮೂರು ಸಾವಿರದಲ್ಲೂಕಡಿತಗೊಂಡುಅವರಿಗೆ ಬರುತ್ತಿದ್ದ ಸಂಬಳ ಒಂದು ಸಾವಿರದಐಂಭೈನೂರು ಮಾತ್ರ.ಅವರು ನಿವೃತ್ತಿಯಾದಾಗಅವರಿಗೆ ಬಂದ ನಲವತ್ತು ಸಾವಿರ ಮೊತ್ತವನ್ನುತಾವುಅಧ್ಯಯನ ಮಾಡಿದ ವಿ.ವಿ.ಗೆ ಕೊಟ್ಟು ಬಿಡುತ್ತಾರೆ.ಅದಕ್ಕೆಕಾರಣಅವರಲ್ಲಿದ್ದಅಸಂಗ್ರಹ ಮನೋಧೋರಣೆ.

ಏನೇ ಆಗಲಿ ಹಣ, ಅಧಿಕಾರ, ಐಶ್ವರ್ಯಗಳು ಮಾನವೀಯ ಸಂಬಂಧಗಳನ್ನು ಹಾಳು ಮಾಡುತ್ತವೆಎನ್ನುವುದನ್ನು ಈ ಮಹನಿಯರೆಲ್ಲಾಅರಿತಿದ್ದರು.ಅದಕ್ಕಾಗಿಯೇಅವರು ಇವುಗಳಿಂದ ದೂರವಿದ್ದರು.ಕನ್ನಡದ ಆದಿಕವಿ ಪಂಪ ಹತ್ತನೆಯ ಶತಮಾನದಲ್ಲೇರಾಜ್ಯಲಕ್ಷ್ಮಿಯು ಹೇಗೆ ಮಾನವೀಯ ಸಂಬಂಧಗಳನ್ನು ಛಿದ್ರಗೊಳಿಸುತ್ತದೆ ಎನ್ನುವುದನ್ನು ಹೇಳಿದ್ದನ್ನು ಗಮನಿಸಬಹುದು–

ಸೋದರರೊಳ್ ಸೋದರರಂ ಕಾದಿಸುವುದು

ಸುತನ ತಂದೆಡೆಯೊಳ್ ಬಿಡದು

ತ್ಪಾದಿಸುವುದು ಕೋಪಮನಳವೀ

ದೊರೆತನತೊಡರ್ವದೆಂತು ರಾಜ್ಯಶ್ರೀಯೊಳ್ (ಆದಿಪುರಾಣ).

***